ಬರುತ್ತಿರಲಿಲ್ಲ. ಅದ್ದರಿಂದ, ಇವತ್ತು KFD ಮತ್ತು Popular Front of Indiaದ ಚಟುವಟಿಕೆಗಳೇನಿದೆ, ಮೈಸೂರಿಗೆ ಬಂದು ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ಕೆಲಸಕ್ಕಾಗಿ, ಕೇರಳದಿಂದ ಮತ್ತು ಬೇರೆ ಬೇರೆ ಜಿಲ್ಲೆಗಳಿಂದ ಏನು ಬಂದಿದ್ದರು, ಇಷ್ಟೂ ವರದಿಯನ್ನು ವಿವರವಾಗಿ ನಾನು ಕೇಂದ್ರದ ಗೃಹ ಸಚಿವರಿಗೆ ಕಳುಹಿಸುತ್ತಿದ್ದೇನೆ, ಈ ಬಗ್ಗೆ ಮಾನ್ಯ ಪ್ರಧಾನಿಯವರಿಗೆ ಪತ್ರ ಬರೆಯುತ್ತಿದ್ದೇನೆ. ಎಲ್ಲಾ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಸೂಕ್ತವಾದಂತಹ ಕ್ರಮವನ್ನು ಈ ಬಗ್ಗೆ ಕೇಂದ್ರವು ಸಹ ತೆಗೆದುಕೊಳ್ಳಬೇಕು. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ಎಲ್ಲೋ ವ್ಯವಸ್ಥಿತವಾದಂತಹ ಪಿತೂರಿ, ಷಡ್ಯಂತ್ರ ಇಲ್ಲಿದೆ. ಇದಕ್ಕೆ ನಾವ್ಯಾರೂ ಬಲಿಯಾಗದೆ, ನಿಷ್ಪಕ್ಷವಾದಂತಹ enquiryಯನ್ನು ನಾವು ಮಾಡಿಸುತ್ತಿದ್ದೇವೆ, ಸತ್ಯ ಹೊರಗಡೆ ಬರುತ್ತದೆ ಎನ್ನುವಂತಹ ವಿಶ್ವಾಸ ನನಗಿದೆ. ಎಲ್ಲಾ ವಿವರಗಳೂ ಸಿಕ್ಕಿದ ಮೇಲೆ, ಮಾಹಿತಿಯನ್ನು ಈ ಮನೆಗೆ ಮಾನ್ಯ ಗೃಹ ಸಚಿವರು ಒದಗಿಸುತ್ತಾರೆ.

10. ಪ್ರಕಟಣೆ

ವಿಷಯ: ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯು ಅಧಿವೇಶನದ ಅವಧಿಯನ್ನು ವಿಸ್ತರಿಸಿರುವ ಬಗ್ಗೆ.

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ.

ದಿನಾಂಕ 09.07.2009ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳ ಕಾಣಿಸಿದ ತೀರ್ಮಾನವನ್ನು ಕೈಗೊಳ್ಳಲಾಗಿದೆ.

ಅಧಿವೇಶನದ ಅವಧಿಯನ್ನು ದಿನಾಂಕ 29.07.2009ರವರೆಗೆ ವಿಸ್ತರಿಸಲಾಗಿದೆ. ಪ್ರತಿ ದಿವಸ ಒಂದೊಂದು ವಿಧೇಯಕವನ್ನು ಆದ್ಯತೆಯ ಮೇರೆಗೆ ಚರ್ಚೆಗೆ ತೆಗೆದುಕೊಳ್ಳುವುದು ಹಾಗೂ ಆ ಅವಧಿಯಲ್ಲಿ ಬೇಡಿಕೆಗಳ ಮೇಲೆ ಚರ್ಚೆಯನ್ನು ಕೈಗೊಳ್ಳುವುದು.

Next agenda, ಗಮನ ಸೆಳೆಯುವ ಸೂಚನೆಗಳು ಇತ್ತು. ಅದಾದ ಮೇಲೆ ವಿತ್ತೀಯ ಕಾರ್ಯಕಲಾಪವಿತ್ತು. ಆದರೆ ಪ್ರತಿಪಕ್ಷದವರು ಸದನದಲ್ಲಿ ಇಲ್ಲದಿರುವ ಕಾರಣಕ್ಕಾಗಿ, ಗಮನ ಸೆಳೆಯುವ ಸೂಚನೆಗಳಲ್ಲಿ ಹೆಚ್ಚಿನವು ಪ್ರತಿಪಕ್ಷದ ಸದಸ್ಯರದೇ ಇದ್ದ ಕಾರಣ, ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ರಾತ್ರಿ 7.29 ಗಂಟೆಗೆ ಮುಂದೂಡಲಾಯಿತು. ಸದನವು ಪುನ: ದಿನಾಂಕ 14ನೇ ಜುಲೈ 2009ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು]